# ಮಕ್ಕಳ ಶಿಕ್ಷಣ ಹಾಗೂ ಪೋಷಣೆಯಲ್ಲಿ ತಂದೆ-ತಾಯಿಗಳ ಪಾತ್ರ

ಡಾ.ಡಿ.ಕೆ. ರಾಜೇಂದ್ರ

ಇತ್ತೀಚಿನ ದಿನಗಳಲ್ಲಿ ಆಧುನಿಕ ಜೀವನ ಶೈಲಿಯಿಂದಾಗಿ ಮಕ್ಕಳ ವಿದ್ಯಾಭ್ಯಾಸವನ್ನು ನೈತಿಕ ಮೌಲ್ಯಗಳೊಂದಿಗೆ ನಡೆಸುವುದು ಒಂದು ದೊಡ್ಡ ಸವಾಲಾಗಿದೆ. ಇದರಲ್ಲಿ ಹೆತ್ತವರ, ಪಾಲಕರ ಪಾತ್ರ ಹಿರಿದು. ಈ ಕುರಿತು ಇಲ್ಲಿ ಚಿಂತಿಸಿರುವ ಲೇಖಕರು ಕನ್ನಡ ನಿವೃತ್ತ ಪ್ರಾಧ್ಯಾಪಕರು ಹಾಗೂ ಹಿರಿಯ ವಿದ್ವಾಂಸರು. ಅನೇಕ ಮಹತ್ವಪೂರ್ಣ ಗ್ರಂಥಗಳನ್ನು ರಚಿಸಿರುವ ಅವರು 'ವಿವೇಕಪ್ರಭ'ದಲ್ಲಿ ಹಲವು ಲೇಖನಗಳನ್ನು ಬರೆದಿದ್ದಾರೆ.

ಮಕ್ಕಳ ಶಿಕ್ಷಣ ಹಾಗೂ ಪೋಷಣೆ ಇವೆರಡೂ ಆಧುನಿಕ ತಂದೆತಾಯಿಗಳಿಗೆ ಹಾಗೂ ಶಿಕ್ಷಕರಿಗೆ ದೊಡ್ಡ ಸವಾಲಿನ ಪ್ರಶ್ನೆಯಾಗಿದೆ. ಬಿಡಿಸಲಾಗದ ಒಗಟಿನಂತಾಗಿದೆ. ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ಗುರುವಿನ ಪಾತ್ರವಷ್ಟೇ ಮುಖ್ಯವಾಗುವುದಿಲ್ಲ. ತಂದೆ ತಾಯಿಗಳ ಪಾತ್ರವೂ ಅಷ್ಟೇ ಮುಖ್ಯವಾಗುತ್ತದೆ. ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು ಎಂಬುದನ್ನು ಆಧುನಿಕ ಶಿಕ್ಷಣ ತಜ್ಞರೂ ಪುರಸ್ಕರಿಸುತ್ತಾರೆ: ''ಹೆತ್ತವರೇ ಮಗುವಿಗೆ ಮೊದಲ ಶಿಕ್ಷಕರು. ಅಧ್ಯಾಪಕರು ಎರಡನೆಯ ಶಿಕ್ಷಕರು. ಮಗುವಿನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಇಬ್ಬರ ಜವಾಬ್ದಾರಿ ಹಾಗೂ ಪಾತ್ರ ಹಿರಿದು.. ಮಕ್ಕಳ ಕಲಿಕೆಯಲ್ಲಿ ಹೆತ್ತವರ ಪ್ರೇರಣೆ ಹಾಗೂ ಸ್ಫೂರ್ತಿ ಬಹಳ ಮುಖ್ಯ.''

ಮಕ್ಕಳ ಬೌದ್ಧಿಕ, ಭೌತಿಕ, ವೈಚಾರಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ – ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಇವರಿಬ್ಬರ ಪಾತ್ರ ಮುಖ್ಯವಾದದ್ದು. ಅಷ್ಟೇ ಏಕೆ? 'ನಮ್ಮ ತಾತ, ಮುತ್ತಾತಂದಿರೂ ನಮ್ಮ ಜೀವನದಲ್ಲಿ ಹೆತ್ತವರಿಗೆ ಸಮಾನ' ಎಂಬ ಅಭಿಪ್ರಾಯವೂ ಇದೆ.

ಪ್ರಾಚೀನ ಕಾಲದ ಶಿಕ್ಷಣದ ಗುರಿ ಮತ್ತು ಪದ್ಧತಿ ಎರಡೂ ವಿಶಿಷ್ಟವಾದುದಾಗಿತ್ತು. ವಿಭಿನ್ನ ರೀತಿಯದ್ದಾಗಿತ್ತು. ಗುರುಕುಲ ಶಿಕ್ಷಣ ಪದ್ಧತಿ ಚಾರಿತ್ರ್ಯವನ್ನು ರೂಪಿಸುವ, ಮನಸ್ಸಿನ ಶಕ್ತಿಯನ್ನು ಹೆಚ್ಚಿಸುವ ಹಾಗೂ ಬುದ್ಧಿಯನ್ನು ವಿಕಾಸಗೊಳಿಸುವ ಏಕೈಕ ಗುರಿಯನ್ನು ಹೊಂದಿತ್ತು. ಜನಪದ ಮೂಲದ ವಿದ್ಯೆ ಕೂಡ ಅದೇ ಆಗಿತ್ತು. ಸೀಮಿತವಾದ ಬದುಕಿನಲ್ಲಿ ವ್ಯಕ್ತಿಯ ಸರ್ವತೋಮುಖವಾದ ಬೆಳವಣಿಗೆಗೆ ಅದು ಪ್ರೇರಣೆಯಾಗಿತ್ತು. ವೃತ್ತಿಪರವಾದ ಶಿಕ್ಷಣಕ್ರಮವನ್ನು ಅದು ಹೊಂದಿದ್ದು ಎಲ್ಲವೂ ಅನುಕರಣೆಯ ಮೂಲಕವೇ ನಡೆಯುತ್ತಿತ್ತು. ಅಷ್ಟೇ ಮಹತ್ವವನ್ನು ಅದು ಚಾರಿತ್ರ್ಯ ಶುದ್ಧಿಗೂ ನೀಡಿತ್ತು.

**ಆಚಾರಕ್ಕರಸಾಗು ನೀತಿಗೆ ಪ್ರಭುವಾಗು**
**ಮಾತಿನಲಿ ಚೂಡಾಮಣಿಯಾಗು । ನನ ಕಂದ**
**ಜ್ಯೋತಿಯೇ ಆಗು ಜಗಕೆಲ್ಲ ॥**



ಇದು ಜನಪದ ವಿದ್ಯೆಯ ಗುರಿಯಾಗಿತ್ತು. ವೃತ್ತಿಶಿಕ್ಷಣ ಹಾಗೂ ಚಾರಿತ್ರ್ಯಶುದ್ಧಿ ಇವೆರಡೇ ಬಾಳಿನ ಗುರಿಯಾಗಿ, ಒಂದೇ ನಾಣ್ಯದ ಎರಡು ಮುಖಗಳಂತಾಗಿತ್ತು.

ಆದರೆ ಇಂದು ಕಾಲ ಬದಲಾಗಿದೆ. ಆಧುನಿಕ ಜಗತ್ತು ದಿನ ಬೆಳಗಾದರೆ ಬೇರೆ ಬೇರೆ ರೂಪವನ್ನು ಪಡೆದುಕೊಳ್ಳುತ್ತಿದೆ. ಹೊರಗಿನ ಆಕರ್ಷಣೆಗಳು ಇನ್ನಿಲ್ಲದಷ್ಟು ರೀತಿಯಲ್ಲಿ ತೆರೆದುಕೊಳ್ಳುತ್ತಿವೆ. ಅದು ಬೃಹದಾಕಾರದಲ್ಲಿ ವ್ಯಾಪಿಸಿ ಯುವ ಮನಸ್ಸನ್ನು ಸೂರೆಗೊಳ್ಳುತ್ತಿವೆ. ಬದುಕಿನ ಸವಾಲುಗಳು, ಬಯಕೆಗಳು ಮಿತಿ ಮೀರಿ ಹೆಚ್ಚಾಗುತ್ತಿವೆ. ಮನಸ್ಸಿನ ಏಕಾಗ್ರತೆಗೆ ಲಗ್ಗೆ ಇಡುವ ಪ್ರಚೋದನಕಾರಿ ವಸ್ತು ವಿಷಯಗಳು ಸುತ್ತಮುತ್ತ ಆವರಿಸುತ್ತಿವೆ. ಆಧುನಿಕತೆಯ ಹೆಸರಿನಲ್ಲಿ ತಲೆ ಎತ್ತುತ್ತಿರುವ ವೈಜ್ಞಾನಿಕ ಉಪಕರಣಗಳು ಮಕ್ಕಳ ಮನಸ್ಸನ್ನು ಕದಲಿಸಿ ಬದಲಿಸುವಲ್ಲಿ ಸಾಕಷ್ಟು ಯಶಸ್ವಿಯಾಗುತ್ತಿವೆ. ಅವು ಬದುಕಿನ ಗುರಿಯನ್ನೇ ಬದಲಿಸುವಷ್ಟು ಪ್ರಭಾವಶಾಲಿಯಾಗಿ ತಂದೆತಾಯಿಗಳಿಗೆ, ಶಿಕ್ಷಕರಿಗೆ ಹಾಗೂ ಸಮಾಜಕ್ಕೆ ದೊಡ್ಡ ಕಂಟಕವಾಗುವ ಎಲ್ಲ ಲಕ್ಷಣಗಳನ್ನು ತೋರುತ್ತಿವೆ. ಶಿಕ್ಷಣ ಮತ್ತು ಶಿಕ್ಷಣದ ಗುರಿ ಏಕಮುಖವಾಗಿಯಷ್ಟೇ ಬೆಳೆಯುತ್ತಿದೆಯೋ ಏನೋ ಎಂಬ ಆತಂಕವನ್ನು ಅದು ಸೃಷ್ಟಿಸಿದೆ. ಶಾಲಾ ಕಾಲೇಜುಗಳಲ್ಲಿ ಶಿಕ್ಷಣ ಪದ್ಧತಿಯೇನೋ ಇದೆ, ಆದರೆ ಅದು ವೃತ್ತಿಪರವಾದ ಶಿಕ್ಷಣ ಕ್ರಮ.

ಅದರಲ್ಲಿ ವ್ಯಕ್ತಿತ್ವ ರೂಪಿಸುವ ಯೋಚನೆಯಾಗಲೀ, ಯೋಜನೆಯಾಗಲೀ, ಕಾಣುತ್ತಿಲ್ಲ. ಇವೆಲ್ಲದರ ದುಷ್ಪರಿಣಾಮ ಊಹೆಗೂ ನಿಲುಕದ್ದು. ನಾಡು, ನುಡಿ, ಸಮಾಜ, ಸಂಸ್ಕೃತಿ, ಇವುಗಳ ಅರಿವಿಲ್ಲದ ಶಿಕ್ಷಣ ಕೇವಲ ಯಂತ್ರರೂಪದ ಮಾನವರನ್ನೇ ಸೃಷ್ಟಿಸಲು ಸಾಧ್ಯ. ಸ್ವಾಮಿ ವಿವೇಕಾನಂದರು ಹೇಳುವಂತೆ ರಾಷ್ಟ್ರದ ಆಧ್ಯಾತ್ಮಿಕ ಮತ್ತು ಲೌಕಿಕ ಶಿಕ್ಷಣದ ಮೇಲೆ ನಮಗೆ ಒಂದು ಹತೋಟಿ ಇರಬೇಕು. ಇದನ್ನು ನೀವು ಕನಸು ಕಾಣಬೇಕು, ಮಾತನಾಡಬೇಕು, ಆಲೋಚಿಸಬೇಕು. ಇದನ್ನು ಅನುಷ್ಠಾನಕ್ಕೆ ತರಬೇಕು ಎಂಬಂತಹ ಬೋಧನೆಯ ಅಗತ್ಯವಿದೆ. ಆದರೆ ಇಂದಿನ ಶಿಕ್ಷಣ ಪದ್ಧತಿಯಲ್ಲಿ ಅದು ಲವಲೇಶವೂ ಇಲ್ಲದಂತಾಗಿದೆ. ಅಂದವಾದ ಗುಡಿಯ ನಿರ್ಮಾಣವಾಗುತ್ತಿದೆ. ಆದರೆ ಅದರಲ್ಲಿ ಮೂರ್ತಿಯೇ ಕಾಣದಾಗಿದೆ. ಮೂರ್ತಿಯೇ ಇಲ್ಲದ ಗುಡಿಗೆ ಯಾವ ಮಹತ್ವ ಬಂದೀತು?

ಇಂದಿನ ಶಿಕ್ಷಣದ ಬಹು ಮುಖ್ಯ ಗುರಿ, ಮಕ್ಕಳನ್ನು ದುಡಿಯುವ ಯಂತ್ರಗಳನ್ನಾಗಿಸುವತ್ತಲೇ ಕೇಂದ್ರೀಕೃತವಾದಂತಿದೆ. ಅವರನ್ನು ಸ್ವಾವಲಂಬಿಗಳನ್ನಾಗಿಸುವಲ್ಲಿ ಅದು ಸೋತಿದೆ. ಇದರಲ್ಲಿ ಪೋಷಕರ ಹಾಗೂ ಶಿಕ್ಷಣ ತಜ್ಞರ ಪಾತ್ರ ಪೈಪೋಟಿಯಲ್ಲಿ ಸಾಗಿದೆ. ಮನಸ್ಸಿನ ಏಕಾಗ್ರತೆಯನ್ನು ಸಾಧಿಸುವುದೇ ಶಿಕ್ಷಣ ಪ್ರಣಾಳಿಕೆಯ ಅಡಿಗಲ್ಲಾಗಿರಬೇಕೇ ಹೊರತು ಕೇವಲ ಅಂಕೆ ಸಂಖ್ಯೆಗಳನ್ನು ಸಂಗ್ರಹಿಸುವುದಲ್ಲ. ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಮಾನಸಿಕ ತರಬೇತಿಯನ್ನು ಪಡೆದ ವ್ಯಕ್ತಿ ಏನನ್ನಾದರೂ ಸಾಧಿಸಲು ಸಾಧ್ಯ. ಏಕೆಂದರೆ ಎಲ್ಲ ಪರಿಸ್ಥಿತಿಗೂ ಹೊಂದಿಕೊಳ್ಳುವಂತೆ ವ್ಯಕ್ತಿಯನ್ನು ಅದು ಹದಗೊಳಿಸುತ್ತದೆ.

## ಮಕ್ಕಳ ಬೆಳವಣಿಗೆಯಲ್ಲಿ ತಂದೆ-ತಾಯಿಗಳ ಪಾತ್ರ

'ಹೆತ್ತವರೆಂದರೆ ದೇವರು ನಮ್ಮ ಜೀವನದಲ್ಲಿ ನಮಗೆ ನೀಡಿದ ಅತ್ಯಂತ ಸುಂದರವಾದ ಹಾಗೂ ಬೆಲೆಬಾಳುವ ಉಡುಗೊರೆ' — ಎಂಬ ಮಾತಿದೆ. ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಅವರುಗಳ ಪಾತ್ರ ಮಹತ್ವದ್ದು. ಅದನ್ನು ಯಾರೂ ಸರಿಗಟ್ಟಲಾರರು. ನಂತರದ ಸ್ಥಾನ ಗುರುವಿಗೆ ಸೇರಿದ್ದು. ಇವರಿಬ್ಬರೂ ಕೈಜೋಡಿಸಿ ದುಡಿದಾಗ ಆದರ್ಶ ವ್ಯಕ್ತಿತ್ವದ ಸುಂದರ ಮೂರ್ತಿಯನ್ನು ರೂಪಿಸಲು ಸಾಧ್ಯ. 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗಲು' ಸಾಧ್ಯವಿಲ್ಲ. ಹಾಗಾಗಿ ಬಾಲ್ಯದಿಂದಲೇ ಮಕ್ಕಳನ್ನು ಸರಿಮಾರ್ಗದಲ್ಲಿ ನಡೆಸುವ ಜವಾಬ್ದಾರಿ ತಂದೆ-ತಾಯಿಗಳಿಬ್ಬರಿಗೂ ಸೇರಿದ್ದು. ತ್ಯಾಗಮಯಿ ತಾಯಿ, ಜವಾಬ್ದಾರಿ ಹೊತ್ತ ತಂದೆ ಇದ್ದಾಗ ಇದು ಸುಲಭಸಾಧ್ಯ. ಆಧುನಿಕ ಜಗತ್ತಿನ ಸಮಸ್ಯೆಗಳು ಪೋಷಕರ ಪಾಲಿಗೂ ತಪ್ಪಿದ್ದಲ್ಲ ಎಂಬುದು ನಿಜವಾದರೂ, ಅವರು ಕರ್ತವ್ಯವನ್ನು ಮರೆಯುವಂತಿಲ್ಲ. ಹಾಗಾಗಿ ಮಕ್ಕಳ ಪೋಷಣೆಯಲ್ಲಿ ಅವರು ಮಾಡಬೇಕಾದ ಕರ್ತವ್ಯಗಳು ಹಲವು ಇವೆ. ಮೌಲ್ಯಾಧಾರಿತ ಬದುಕಿಗೆ ಮಕ್ಕಳನ್ನು ಅಣಿಗೊಳಿಸುವುದು ಎಲ್ಲರ ಕರ್ತವ್ಯ. ಅದು ಮೊದಲು ಮನೆಯಿಂದ ತಂದೆ ತಾಯಿಗಳಿಂದಲೇ ಆರಂಭವಾಗಬೇಕಾಗಿದೆ. ಅದು ಸಾಧ್ಯವಾಗುವುದು ತಂದೆತಾಯಿಗಳು ಕೆಲವೊಂದು ನಿರ್ಧಾರಗಳಿಗೆ ಹಾಗೂ ತ್ಯಾಗಕ್ಕೆ ತಾವು ಮೊದಲು ಸಿದ್ಧಗೊಂಡಾಗ ಮಾತ್ರ.

೧. ಮಕ್ಕಳಿಗೆ ಮಾದರಿಯಾಗಿ ಬದುಕಿ : ಮಕ್ಕಳು ಬಹಳ ಬೇಗ ತಂದೆ-ತಾಯಿಗಳನ್ನು ಅನುಸರಿಸುತ್ತಾರೆ, ಅನುಕರಿಸುತ್ತಾರೆ. ಅವರಿಂದ ಪ್ರಭಾವಿತರಾಗುತ್ತಾರೆ. ಆದ್ದರಿಂದ ಅವರಿಗೆ ಸ್ಫೂರ್ತಿದಾಯಕವಾಗಿ ನಡೆದುಕೊಳ್ಳಿ. ನಿಮ್ಮಗಳ ವರ್ತನೆಯಿಂದ, ನಡೆಯಿಂದ ಅವರ ನಡೆ ಮತ್ತು ವಿಚಾರಗಳು ಪರಿಶುದ್ಧವಾಗಿ ರೂಪುಗೊಳ್ಳುವಂತೆ ನೋಡಿಕೊಳ್ಳಿ. ನಿಮ್ಮ ಉಡುಗೆ, ತೊಡುಗೆ, ಮಾತಿನ ರೀತಿನೀತಿ ಮುಂತಾದವು ಅವರಿಗೆ ಮಾರ್ಗದರ್ಶಕವಾಗಿರಲಿ. ಮನೆಯಲ್ಲಿ ಸತ್ಸಂಗದ ವಾತಾವರಣ ಸೃಷ್ಟಿಸುವ ಜವಾಬ್ದಾರಿ ಪೋಷಕರದ್ದು ಎಂಬುದನ್ನು ನೆನಪಿಸಬೇಕು.

೨. ರಚನಾತ್ಮಕ ವಿಮರ್ಶೆ ನಿಮ್ಮದಾಗಿರಲಿ : ಮಕ್ಕಳನ್ನು ತಿದ್ದುವ ನೆಪದಲ್ಲಿ ಅತಿಯಾದ ಕಾಠಿಣ್ಯ ಸಲ್ಲದು. ಅದು ಅವರಲ್ಲಿ ಮತ್ತೊಂದು ಬಗೆಯ ವರ್ತನೆಗೆ ಕಾರಣವಾಗಬಹುದು. ಆದ್ದರಿಂದ ಅವರನ್ನು ತಿದ್ದುವ ಅಥವಾ ಸರಿ ಮಾರ್ಗದಲ್ಲಿ ತರುವ ಸಂದರ್ಭದಲ್ಲಿ ನಿಮ್ಮ ಸಲಹೆ ಸೂಚನೆಗಳು ರಚನಾತ್ಮಕ ರೂಪದ್ದಾಗಿದ್ದು (Constructive Criticism) ಅವರಿಗೆ ಪ್ರಿಯವಾಗುವಂತಿರಲಿ. ತಪ್ಪಿನ ಅರಿವು ತಾನೇ ಆಗಿ ಅವರನ್ನು ಎಚ್ಚರಿಸುವಂತಾಗಲಿ. ಮೊಬೈಲ್ ಬಳಕೆಯ ಉದ್ದೇಶ ಮತ್ತು ಅದರ ಅಗತ್ಯದ ಅರಿವು ಅವರಿಗಿರಲಿ. ದುರ್ಬಳಕೆಯ ಅಪಾಯದ ಅರಿವನ್ನು ಮಾಡಿಕೊಡಿ. ಅದರಿಂದ ಮಕ್ಕಳು ತಾವಾಗಿಯೇ ತಪ್ಪು-ಸರಿಗಳ ವಿವೇಚನೆಗೆ ಒಳಗಾಗುತ್ತಾರೆ. ಮೊದಲು ನೀವು ಅದನ್ನು ಪಾಲಿಸುವುದನ್ನು ಮರೆಯಬೇಡಿ. ಅದು ಸಹಜವಾಗಿಯೇ ಅವರ ಮೇಲೂ ಪ್ರಭಾವ ಉಂಟುಮಾಡುತ್ತದೆ.

೩. ಮಕ್ಕಳ ಓದುವಿಕೆಯತ್ತ ಗಮನ ಹರಿಸುತ್ತಿರಿ : ಮಕ್ಕಳ ಶಾಲಾ ಫೀಜನ್ನು ಕಟ್ಟಿ, ಪುಸ್ತಕಗಳನ್ನು ಒದಗಿಸಿಕೊಟ್ಟರಷ್ಟೇ ಸಾಲದು. ಅದರ ಸದ್ಬಳಕೆಯತ್ತ ಗಮನಹರಿಸಿ, ಏನನ್ನು ಓದುತ್ತಿದ್ದಾನೆ? ಎಷ್ಟನ್ನು ಓದಿದ್ದಾನೆ? ಹೇಗೆ ಓದುತ್ತಿದ್ದಾನೆ? ಇತ್ಯಾದಿಗಳ ಬಗ್ಗೆ ಗಮನ ಹರಿಸುತ್ತಿದ್ದರೆ ಅವನ ಆಸಕ್ತಿ, ಶ್ರದ್ಧೆ ಹಾಗೂ ಓದಿನಲ್ಲಿನ ಅವನ ಬದ್ಧತೆಯ ಅರಿವು ನಿಮಗಾಗುತ್ತದೆ. ತಪ್ಪಿದಲ್ಲಿ ತಿದ್ದುವ ಅವಕಾಶವೂ ನಿಮಗಿರುತ್ತದೆ. ಒಮ್ಮೆ ಆ ಶ್ರದ್ಧೆ ಹಾಗೂ ಆಸಕ್ತಿ ಮುಂದುವರಿದರೆ ನಂತರ ಅದರ ಬಗ್ಗೆ ಹೆಚ್ಚು ಆತಂಕಗೊಳ್ಳುವ ಅಗತ್ಯವಿರುವುದಿಲ್ಲ.

೪. ಜೊತೆಯಲ್ಲಿ ಕುಳಿತು ಓದಿ : ಮಕ್ಕಳೊಂದಿಗೆ ನೀವೂ ಏನನ್ನಾದರೂ ಓದುವ ಹವ್ಯಾಸವನ್ನು ಬೆಳೆಸಿಕೊಂಡರೆ ಅದು ಅವರಲ್ಲಿನ ಆಸಕ್ತಿಯನ್ನು ಹೆಚ್ಚು ಮಾಡುತ್ತದೆ. ನಿಮ್ಮೊಂದಿಗೆ ಏನನ್ನಾದರೂ ಚರ್ಚಿಸಲು ಅವರಿಗೆ ಅವಕಾಶವಿರುತ್ತದೆ. ಪಾಠದಲ್ಲಿ ಅರ್ಥವಾಗದ್ದನ್ನು ಅಥವಾ ತರಗತಿಯಲ್ಲಿ ಪ್ರಶ್ನಿಸಲಾಗದ್ದನ್ನು ಅವರು ನಿಮ್ಮೊಂದಿಗೆ ಚರ್ಚಿಸಿ ಬಗೆಹರಿಸಿಕೊಳ್ಳಬಹುದು. ಹೆಚ್ಚಿನ

ದನ್ನು ಹೇಳಲು ನಿಮಗೂ ಅವಕಾಶ ದೊರೆತಂತಾಗುತ್ತದೆ. ಮಕ್ಕಳಲ್ಲಿ ಒಂದು ಬಗೆಯ ಆತ್ಮವಿಶ್ವಾಸ ಅದರಿಂದ ಹೆಚ್ಚಾಗುವುದರ ಜೊತೆಗೆ ಓದಿನಲ್ಲಿ ಹೆಚ್ಚಿನ ಶ್ರದ್ಧೆ ಯುಂಟಾಗುತ್ತದೆ.

**೫. ಓದು ಅವರಿಗೆ ಹೆಚ್ಚಿನ ಹೊರೆಯಾಗದಂತೆ ಎಚ್ಚರ ವಹಿಸಿ :** ಓದಿನಲ್ಲಿ ಹೆಚ್ಚಿನ ಶ್ರದ್ಧೆ ಮತ್ತು ಆಸಕ್ತಿ ಉಂಟಾಗು ವಂತೆ ಮಾಡುವುದು ನಿಮ್ಮ ಕರ್ತವ್ಯ. ಹೆಚ್ಚಿನ ಅಂಕ ಗಳಿಸಲಿ ಎಂಬ ಉದ್ದೇಶದಿಂದ ಅವರ ಮೇಲೆ ಬಲವಂತದ ಬರೆ ಎಳೆಯುವುದು ತಪ್ಪಾಗುತ್ತದೆ. ಓದು ಜ್ಞಾನಾರ್ಜನೆಗಾಗಿ ಎಂಬ ಅರಿವೂ ಅವರಲ್ಲಿ ಉಂಟಾಗಲಿ. ಪಾಠದ ನೆಪದಲ್ಲಿ ಅಥವಾ ಆ ಸಂದರ್ಭದಲ್ಲಿಯೇ ಸಮಾಜದ ಬಗ್ಗೆ, ದೇಶದ ಬಗ್ಗೆ, ದೇಶಭಕ್ತಿಯ ಬಗ್ಗೆ, ಸಾಹಿತ್ಯ, ಸಂಸ್ಕೃತಿ ಹಾಗೂ ಮಾನವೀಯ ಮೌಲ್ಯಗಳ ಬಗ್ಗೆ ತಿಳುವಳಿಕೆ ನೀಡಿ, ಮಾನವ ಸಂಬಂಧಗಳ ಬಗ್ಗೆ ಅರಿವುಂಟುಮಾಡಿ. ರಾಷ್ಟ್ರಪ್ರೇಮವನ್ನು ಬೆಳೆಸಿ, ಧರ್ಮ, ಇತಿಹಾಸ, ಅಧ್ಯಾತ್ಮ ಮುಂತಾದವುಗಳ ಬಗ್ಗೆ ಆಸಕ್ತಿ ಮೂಡುವಂತೆ ಮಾಡಿ. ಅದರಿಂದ ಅವರ ವ್ಯಕ್ತಿತ್ವದಲ್ಲಿನ ಮಹತ್ವದ ಬೆಳವಣಿಗೆಯನ್ನು ನೀವು ಕಾಣಬಹುದು. ಶುದ್ಧ ಚಾರಿತ್ರ್ಯವನ್ನು ರೂಪಿಸಲು ಇವೆಲ್ಲ ಸಹಕಾರಿ. ನೈತಿಕತೆಯ ಅರಿವನ್ನುಂಟುಮಾಡಿ, ಅದು ಎಂದೆಂದಿಗೂ ಅವರನ್ನು ರಕ್ಷಿಸುವ ಶ್ರೀರಕ್ಷೆಯಾಗುತ್ತದೆ. ಬದುಕಿನ ಸಾರ್ಥಕತೆಯ ಬಗ್ಗೆ ಎಚ್ಚರ ಉಂಟುಮಾಡಿ.

**೬. ಮಕ್ಕಳ ಸಾಮರ್ಥ್ಯ ಮತ್ತು ಧಾರಣ ಶಕ್ತಿ :** ಮಕ್ಕಳ ಮನಸ್ಸನ್ನು ಮೊದಲು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ. ಅವರ ಸಾಮರ್ಥ್ಯ (Capacity) ಮತ್ತು ಧಾರಣಶಕ್ತಿ (Capability) ಎಷ್ಟೆಂಬುದನ್ನು ತಿಳಿಯಲು ಪ್ರಯತ್ನಿಸಿ. ಏಕೆಂದರೆ ಎಲ್ಲರಲ್ಲಿಯೂ ಇದು ಸಮಾನವಾಗಿರುತ್ತದೆಯೆಂದು ಭಾವಿಸಲಾಗದು. ಅವರ ಆಸಕ್ತಿ, ಅಭಿರುಚಿ, ಸಾಮರ್ಥ್ಯ ಹಾಗೂ ಧಾರಣಶಕ್ತಿ ಇವು ಆ ವ್ಯಕ್ತಿಯ ಬೆಳವಣಿಗೆಯಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ತಂದೆತಾಯಿಗಳು ಅದನ್ನು ಅರಿಯುವ ಪ್ರಯತ್ನ ಮಾಡದೆ ಬಲತ್ಕಾರದಿಂದ ವರ್ತಿಸಿದಾಗ ಪರಿಣಾಮ ವಿರುದ್ಧವಾಗುವುದನ್ನು ಗಮನಿಸಿದ್ದೇವೆ. ಶಿಕ್ಷಣದ ಮುಖ್ಯಗುರಿ ಜೀವನವನ್ನು ಸದೃಢಗೊಳಿಸುವುದು ಎಂಬುದನ್ನು ಮೊದಲು ನಾವು ಅರಿತಿರಬೇಕು. ನಂತರ ಮಕ್ಕಳಲ್ಲಿ ಅದು ಅರಳುವಂತೆ ಮಾಡುವುದು ತಂದೆ ತಾಯಿಗಳ ಹಾಗೂ ಶಿಕ್ಷಕರ ಕರ್ತವ್ಯ. ಅದಿಲ್ಲದ ಶಿಕ್ಷಣ ಅಪೂರ್ಣವೆನಿಸುತ್ತದೆ. ಶಿಕ್ಷಣದ ಗುರಿ ವ್ಯಕ್ತಿತ್ವ ನಿರ್ಮಾಣ ಎಂಬ ಅರಿವೂ ಇದ್ದರೆ ದೇಶದ ಉತ್ತಮ ಪ್ರಜೆಯನ್ನು ರೂಪಿಸಿದಂತಾಗುತ್ತದೆ. ಅದರಿಂದ ಶಾಂತಿ, ನೆಮ್ಮದಿ, ಶಿಸ್ತು ನೆಲೆಗೊಳ್ಳಲು ಸಾಧ್ಯ.

**೭. ಒಳ್ಳೆಯ ವಾತಾವರಣವಿರಲಿ :** ಯಾವುದೇ ಗಿಡ, ಮರ, ಪಕ್ಷಿ ಆರೋಗ್ಯಪೂರ್ಣವಾಗಿ ಜೀವಿಸಲು ಅದಕ್ಕೆ ಒಳ್ಳೆಯ ವಾತಾವರಣದ ಅಗತ್ಯವಿರುತ್ತದೆ. ಅದಿಲ್ಲದೆ ಯಾವೊಂದು ಜೀವಿಯೂ ಸಮೃದ್ಧವಾಗಿ ಜೀವಿಸಲಾರದು. ಮಕ್ಕಳು ಓದುವ ಮನೆಯ ವಾತಾವರಣವಾಗಲಿ, ಶಾಲೆಯ ವಾತಾವರಣವಾಗಲೀ ಹಿತಕರವಾಗಿದ್ದರೆ ಅದು ಮಕ್ಕಳ ಮನಸ್ಸಿನ ಮೇಲೆ ಪ್ರಭಾವ ಪರಿಣಾಮ ಎರಡನ್ನೂ ಉಂಟುಮಾಡುತ್ತದೆ. ಉತ್ಸಾಹವನ್ನು ತುಂಬುತ್ತದೆ. ಪ್ರೇರಣೆಯನ್ನು ನೀಡುತ್ತದೆ. ಆಸಕ್ತಿಯನ್ನು ಬೆಳೆಸುತ್ತದೆ. ಓದುವ ಸಂದರ್ಭದಲ್ಲಿ ಅದಕ್ಕೆ ಅಗತ್ಯವಾದ ವಾತಾವರಣವಿರುವಂತೆ ನೋಡಿಕೊಳ್ಳಿ. ಅದು ಮಕ್ಕಳ ಮಾನಸಿಕ ಬೆಳವಣಿಗೆಗೂ ಸ್ಫೂರ್ತಿ ನೀಡುತ್ತದೆ.

**೮. ಮಕ್ಕಳ ಹೋಂವರ್ಕ್ ವಿಷಯದಲ್ಲಿ ನೆರವಾಗಿ :** ತಂದೆ-ತಾಯಿಗಳ ಮಾರ್ಗದರ್ಶನದಲ್ಲಿ ಮಕ್ಕಳು ಚುರುಕಾಗುತ್ತಾರೆ. ಶ್ರದ್ಧೆಯನ್ನು ಆಸಕ್ತಿಯನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ಉತ್ಸಾಹ ಹೆಚ್ಚಾಗುತ್ತದೆ. ಆತ್ಮವಿಶ್ವಾಸದ ಕೊರತೆ ನೀಗುತ್ತದೆ. ಅವರೊಂದಿಗಿನ ನಿಮ್ಮ ಸಹಭಾಗಿತ್ವ ಅವರನ್ನು ಉತ್ತೇಜಿಸಿದಂತಾಗಿ ಓದಿನತ್ತ ಹೆಚ್ಚು ಗಮನ ಹರಿಸುತ್ತಾರೆ. ಆ ಸಂದರ್ಭವನ್ನು ನೀವು ಅವರಲ್ಲಿ ಆ ಸಂಬಂಧವಾದ ಇತರ ಆಸಕ್ತಿಯ ವಿಷಯಗಳನ್ನು ತಿಳಿಸಲು ಸಾಧ್ಯವಾಗುತ್ತದೆ. ಲೋಕಜ್ಞಾನದ ಅರಿವನ್ನುಂಟುಮಾಡಲು ಅವಕಾಶ ದೊರೆತಂತಾಗುತ್ತದೆ. ಟೆಸ್ಟ್ ಮತ್ತು ಪರೀಕ್ಷೆಯ ಸಂದರ್ಭಗಳಲ್ಲಿ ಅವರಿಗೆ ಬೇಸರವಾಗದಂತೆ ನೋಡಿಕೊಳ್ಳಲು ನಿಮ್ಮದೇ ಆದ ರೀತಿಯಲ್ಲಿ ನೆರವಾಗಿ. ಅದರಿಂದ ಅವರಲ್ಲಿನ ಆತಂಕ ದೂರಮಾಡಿದಂತಾಗುತ್ತದೆ.

**೯. ಮಕ್ಕಳನ್ನು ಉತ್ತೇಜಿಸುವಂತೆ ವರ್ತಿಸಿ :** ಬೆನ್ನು ತಟ್ಟುವುದು, ಚಪ್ಪಾಳೆ ಹೊಡೆಯುವುದು, ಒಳ್ಳೆಯ ಮಾತುಗಳನ್ನಾಡುವುದು ಒಬ್ಬ ವ್ಯಕ್ತಿಯಲ್ಲಿ ಉತ್ತೇಜನ ತುಂಬುವ ಹಲವು ಮಾರ್ಗಗಳು. ಅದರಲ್ಲಿಯೂ ಮಕ್ಕಳು ಅಂತಹುದರಿಂದ ಹೆಚ್ಚು ಪ್ರೇರಣೆಗೊಳ್ಳುತ್ತಾರೆ. ಅವರು ಮಾಡುವ ಒಂದೊಂದು ಸಣ್ಣಪುಟ್ಟ ಕಾರ್ಯಗಳನ್ನು ಶ್ಲಾಘಿಸಿ ಹುರಿದುಂಬಿಸಿ, ಹೆಚ್ಚಿನ ಅಂಕ ಗಳಿಸಿದಾಗ ಒಳ್ಳೆಯ ಮಾತುಗಳನ್ನಾಡಿ, ಅದರಿಂದ ಅವರು ಮತ್ತಷ್ಟು ಉತ್ಸಾಹ ಹೊಂದುತ್ತಾರೆ. ಕಡಿಮೆ ಅಂಕ ಗಳಿಸಿದರೆಂದು ಹೀಯಾಳಿಸಬೇಡಿ, ಆಗಲೂ ಅವರನ್ನು ಪ್ರೋತ್ಸಾಹಿಸಿ ಮುಂದೆ ಬರುವಂತೆ ಮಾಡಿ, ಅವರ ಆತ್ಮಸ್ಥೈರ್ಯ ಎಂದೂ ಕುಗ್ಗದಂತೆ ನೋಡಿಕೊಳ್ಳಿ.

**೧೦. ಅವರಿಗಾಗಿ ನಿಮ್ಮ ಸ್ವಲ್ಪ ಸಮಯ ಮೀಸಲಿಡಿ :** ಮಕ್ಕಳೊಂದಿಗೆ ಕಳೆಯುವ ನಿಮ್ಮ ಒಂದೊಂದು ನಿಮಿಷವೂ ಅವರ ಪಾಲಿಗೆ ಶಿಕ್ಷಣವಿದ್ದಂತೆ. ಅದನ್ನು ಆನಂದದಿಂದ ಅನುಭವಿಸಿ ಕಲಿಯುತ್ತಾರೆ. ನಿಮ್ಮಗಳ ಬಾಂಧವ್ಯ, ಪ್ರೀತಿ, ವಾತ್ಸಲ್ಯ, ಮಮತೆ ಮತ್ತಷ್ಟು ಬಲಗೊಳ್ಳುತ್ತದೆ. ಅಂತಹ ಸಂದರ್ಭದಲ್ಲಿ ಪಠ್ಯಭಾಗಗಳಲ್ಲಿ ಇಲ್ಲದ ಮೌಲಿಕ ವಿಚಾರಗಳನ್ನು ಅವರಿಗೆ ತಿಳಿಹೇಳಿ, ಅದು ಬೇಗ ಅವರ ಮನಸ್ಸನ್ನು ಹೊಕ್ಕು ಪರಿಣಾಮ ಬೀರುತ್ತದೆ. ಶಿಕ್ಷಣವೆಂದರೆ ಭೌತಿಕ, ಬೌದ್ಧಿಕ, ನೈತಿಕ ಮತ್ತು ಆಧ್ಯಾತ್ಮಿಕತೆಗಳ ಸರ್ವತೋಮುಖ ಸಂಸ್ಕಾರ, ಸಂಸ್ಕೃತಿ ಎಂಬುದು

ನಿಚ್ಚಳವಾಗುತ್ತದೆ ಎಂಬಂ ತಹ ಸಂಗತಿಗಳನ್ನು ಮಕ್ಕಳಿಗೆ ಮನದಟ್ಟಾಗಿಸಿ, ಅದರಿಂದ ಅವರ ಭವಿಷ್ಯ ಉಜ್ವಲವಾಗುತ್ತದೆ.

೧೧. ಕೀಳರಿಮೆಯುಂಟಾಗದಂತೆ ಎಚ್ಚರವಹಿಸಿ : ಮಕ್ಕಳಲ್ಲಿ ಕೀಳರಿಮೆಯುಂಟಾಗದಂತೆ ನೋಡಿಕೊಳ್ಳಿ. ಅದು ಕ್ರಮೇಣ ಅವರ ಮೇಲೆ ದುಷ್ಪರಿಣಾಮ ಬೀರಲು ಕಾರಣವಾಗುತ್ತದೆ. ಅವರಲ್ಲಿ ಹುದುಗಿರುವ ಶಕ್ತಿಯ ಅರಿವನ್ನು ಅವರಿಗೆ ಉಂಟುಮಾಡಲು ಪ್ರಯತ್ನಿಸಿ. ಅಂತಹ ನಿದರ್ಶನಗಳನ್ನು ಅವರಿಗೆ ಕೊಡಿ. ಸೋಲು ಕೊನೆಯದಲ್ಲ ಎಂಬುದರ ಬಗ್ಗೆ ತಿಳಿಸಿ, ಆತ್ಮವಿಶ್ವಾಸದ ಕೊರತೆ ಬರದಂತೆ ನೋಡಿ ಕೊಳ್ಳಿ. ಹೆಚ್ಚಿನ ಸಾಧನೆ ತೋರಿದವರ ಬಗ್ಗೆ ಹೊಗಳಿ ಹಾಡಿ, ಇವನಲ್ಲಿಯ ಶಕ್ತಿಯನ್ನು ಕುಂದಿಸಬೇಡಿ. 'ಸರ್ವತೋಮುಖವಾದ ಪುರುಷಸಿಂಹಗಳನ್ನು ಮಾಡುವ ವಿದ್ಯಾಭ್ಯಾಸ ನಮಗೆ ಇಂದು ಬೇಕಾಗಿದೆ' ಎಂಬ ಸ್ವಾಮಿ ವಿವೇಕಾನಂದರ ಮಾತನ್ನು ನೆನಪಿಡಿ. ಅವರ ದೃಷ್ಟಿಯಲ್ಲಿ ಯಾರೂ ಹೇಡಿಗಳಲ್ಲ, ಯಾರೂ ಅಶಕ್ತರಲ್ಲ. ಅವರ ದೃಷ್ಟಿಯಲ್ಲಿ ವಿದ್ಯಾಭ್ಯಾಸವೆಂದರೆ ನಿಮ್ಮ ತಲೆಗೆ ತುಂಬಿದ ವಿಷಯಗಳ ಮೊತ್ತ ವಲ್ಲ. ಅದು ಅಲ್ಲಿ ಜೀರ್ಣವಾಗದೆ ಚೆಲ್ಲಾಪಿಲ್ಲಿಯಾಗಿ ಬಿದ್ದಿರುವುದು. ಜೀವನವನ್ನು ನಿರ್ಮಾಣ ಮಾಡುವಂತಹ, ಪುರುಷಸಿಂಹರನ್ನು ಮಾಡುವಂತಹ, ಶೀಲಸಂಪತ್ತಿಗೆ ಸಹಾಯ ಮಾಡುವಂತಹ ವಿಚಾರಗಳನ್ನು ಗ್ರಹಿಸುವಂತಹ ವಿದ್ಯಾಭ್ಯಾಸ ನಮಗೆ ಬೇಕು.

೧೨. ಸ್ನೇಹಿತರಾಗಿರಿ, ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ : ಶಿಸ್ತಿನಿಂದ ಬೆಳೆಸಬೇಕೆಂಬ ಕಾರಣಕ್ಕೆ ಮಕ್ಕಳನ್ನು ನಿಮ್ಮಿಂದ ದೂರ ವಿಡಬೇಡಿ, ಸ್ನೇಹಿತರಂತೆ ಕಾಣಿ. ನಿಮ್ಮ ಅನುಭವಗಳನ್ನು ಅವರೊಂದಿಗೆ ಹಂಚಿಕೊಳ್ಳಿ. ಅದರಿಂದ ಆತ್ಮೀಯತೆ ಹೆಚ್ಚಾಗುತ್ತದೆ. ಪ್ರೀತಿ, ವಿಶ್ವಾಸ, ನಂಬಿಕೆ ವೃದ್ಧಿಸುತ್ತದೆ. ಹೊರಗಿನ ಆಕರ್ಷಣೆ ಕಡಿಮೆಯಾಗಿ, ನಿಮ್ಮೊಂದಿಗೇ ಹೆಚ್ಚು ಬೆರೆಯಲು, ಕಾಲ ಕಳೆಯಲು ಇಚ್ಛಿಸುತ್ತಾರೆ. ತಮ್ಮ ಸಮಸ್ಯೆಗಳನ್ನು, ವಿಚಾರಗಳನ್ನು ನಿಮ್ಮೊಂದಿಗೆ ಸಲಿಗೆಯಿಂದ ವಿನಿಮಯಮಾಡಿಕೊಳ್ಳಲು ಬಯಸುತ್ತಾರೆ. ನಿಮ್ಮ ಬಗ್ಗೆ ಹೆಚ್ಚಿನ ಗೌರವಯುತ ಪ್ರೀತಿ ಹೆಚ್ಚಾಗುತ್ತದೆ. ಅದರಿಂದ ಅವರ ವ್ಯಕ್ತಿತ್ವದಲ್ಲಿ ಮಹತ್ವದ ಬದಲಾವಣೆಯನ್ನು ನೀವು ಕಾಣಬಹುದು.

೧೩. ಮಕ್ಕಳ, ಶಾಲೆಯ ಹಾಗೂ ಶಿಕ್ಷಕರ ಸಂಪರ್ಕ ದಲ್ಲಿರಿ : ಮಕ್ಕಳನ್ನು ಶಾಲೆಗೆ ಸೇರಿಸಿದರಷ್ಟೇ ಕರ್ತವ್ಯ ಮುಗಿದಂತಾಗುವುದಿಲ್ಲ. ನಿರಂತರ ಅಲ್ಲಿಯ ಸಂಪರ್ಕದಲ್ಲಿರಿ. ಮಕ್ಕಳ ಚಟುವಟಿಕೆಗಳ ಬಗ್ಗೆ ಗಮನವಿರಲಿ. ಸ್ನೇಹಬಳಗದ ಬಗ್ಗೆ ಎಚ್ಚರವಿರಲಿ. ಕ್ಲಾಸ್‌ಟೀಚರ್ ಸಂಪರ್ಕವಿದ್ದು ಮಕ್ಕಳ ಪ್ರಗತಿಯ ಬಗ್ಗೆ ವಿಚಾರಿಸುತ್ತಿರಿ.

೧೪. ಶೈಕ್ಷಣಿಕ ಪ್ರವಾಸ ಒಳ್ಳೆಯದು : ಮಕ್ಕಳೊಂದಿಗೆ ಶೈಕ್ಷಣಿಕ ಪ್ರವಾಸ ಕೈಗೊಳ್ಳಿ. ಅದರಿಂದ ಅವರ ಮನಸ್ಸು ಉಲ್ಲಾಸಭರಿತವಾಗುವುದಷ್ಟೇ ಅಲ್ಲ, ಆ ಮೂಲಕ ಅವರಲ್ಲಿ ಹಲವು ಚಾರಿತ್ರಿಕ, ಸಾಂಸ್ಕೃತಿಕ, ಸಾಮಾಜಿಕ ವಿಚಾರಗಳನ್ನು ಬಿತ್ತಲು, ಪರಿಚಯಿಸಲು, ಹಂಚಿಕೊಳ್ಳಲು ಸಾಧ್ಯವಾಗುತ್ತದೆ. ಅವರ ಬೌದ್ಧಿಕ ಬೆಳವಣಿಗೆಯ ಜೊತೆಗೆ ವಿಚಾರಶಕ್ತಿ ಹೆಚ್ಚಾಗಲು ಸಹಕಾರಿಯಾಗುತ್ತದೆ.

೧೫. ಮಕ್ಕಳ ಸೃಜನಾತ್ಮಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ : ಮಕ್ಕಳಲ್ಲಿ ಅಡಗಿರುವ ಶಕ್ತಿಯನ್ನು, ಸೃಜನಾತ್ಮಕ ಪ್ರತಿಭೆಯನ್ನು ಗುರುತಿಸಿ, ಅದಕ್ಕೆ ಪ್ರೋತ್ಸಾಹಿಸಿ. ಅದು ಕಮರಿ ಹೋಗಲು ಬಿಡಬೇಡಿ. ಯಾರಲ್ಲಿ ಎಂತೆಂತಹ ಪ್ರತಿಭೆ ಹುದುಗಿದೆ ಎಂಬುದನ್ನು ಯಾರು ಬಲ್ಲರು? ಮುಂದೆ ಅದೇ ಹೆಮ್ಮರವಾಗಿ ವೃದ್ಧಿಸಿದರೆ ಆಶ್ಚರ್ಯಪಡಬೇಕಾಗಿಲ್ಲ. ಅದು ಅವನಿಗೆ ಕೊರಗಾಗಿ, ಮುಖ್ಯವಾಹಿನಿಗೆ ಅಡ್ಡಿಯಾಗದಂತೆ ಎಚ್ಚರವಹಿಸಿ.

ಇಂದಿನ ಶಿಕ್ಷಣ ಪದ್ಧತಿಯ ಬಗೆಗೆ, ಅದರ ವ್ಯವಸ್ಥೆ – ಅವ್ಯವಸ್ಥೆಗಳ ಬಗೆಗೆ ಎಲ್ಲರೂ ಮಾತನಾಡುತ್ತಾರೆ. ಆದರೆ ಯಾರೊಬ್ಬರೂ 'ಹೀಗೇ ಇರಬೇಕು' ಎಂದು ಕಡ್ಡಿ ತುಂಡುಮಾಡಿದಂತೆ ಹೇಳಲು ಸಾಧ್ಯವಾಗಿಲ್ಲ. ಬಹುಮುಖ್ಯ ಕಾರಣ – ಸ್ವಾರ್ಥ. ತಮ್ಮ ಮಕ್ಕಳು ಇಂಜಿನಿಯರೇ ಆಗಬೇಕು, ವೈದ್ಯನೇ ಆಗಬೇಕು, ಐ.ಎ.ಎಸ್., ಐ.ಪಿ.ಎಸ್ ಅಧಿಕಾರಿಯೇ ಆಗಬೇಕು ಎಂಬುದು. ಈ ಕಾರಣದಿಂದಾಗಿ ಮಕ್ಕಳು ಗಳಿಸಬೇಕಾದ ಅಂಕ (Marks) ದ ಹೊರತಾಗಿ ಯಾರೊಬ್ಬರೂ ಮಕ್ಕಳ ವ್ಯಕ್ತಿತ್ವದ ಬೆಳವಣಿಗೆಯ ಕಡೆಗಾಗಲೀ, ದೇಶಾಭಿಮಾನ – ಭಾಷಾಭಿಮಾನವನ್ನು ಬೆಳೆಸುವ ಕಡೆಗಾಗಲೀ ಗಮನ ಹರಿಸದಂತಾಗಿದೆ. ಎಲ್ಲರ ಗುರಿ ಅಂಕಗಳಿಕೆ ಅಷ್ಟೇ ಆಗಿದೆ.

ಆದರೆ ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಶಿಕ್ಷಣದ ಗುರಿಯೇ ಬೇರೆ – ಎಲ್ಲ ಶಿಕ್ಷಣದ ಗುರಿ ಮಾನವನ ನಿರ್ಮಾಣವಾಗಬೇಕು ಎಂಬುದು. ಮುಂದುವರಿದು ಹೇಳುತ್ತಾರೆ : ''ನಾವು ಯಾವತ್ತೂ ಹೊರಗಿನ ಮೆರುಗನ್ನು ಕೊಡಲು ಯತ್ನಿಸುತ್ತಿರುತ್ತೇವೆ. ಒಳಗನ್ನು ಮುಟ್ಟದೇ ಬರೇ ಹೊರಗಿನ ಮೆರುಗು ಏನು ಸಾರ್ಥಕ?'' ಎಲ್ಲ ತರಬೇತಿಯ ಗುರಿ ಮತ್ತು ಉದ್ದೇಶ ಯಾವಾಗಲೂ ಮಾನವನ ಬೆಳವಣಿಗೆಗೆ ಪೂರಕವಾಗಬೇಕು.

ಸ್ವಾಮಿ ವಿವೇಕಾನಂದರು ಬಯಸುವ ಇಂತಹ ವಿದ್ಯೆಗೆ ಪೋಷಕರು, ಶಿಕ್ಷಕರು, ಶಿಕ್ಷಣತಜ್ಞರು ಎಲ್ಲರೂ ನೀರೆರೆಯಬೇಕಾಗಿದೆ. ಅದರ ಸಮೃದ್ಧಿಗೆ ಪಾಲುದಾರರಾಗಬೇಕಾಗಿದೆ. ವಿದ್ಯಾರ್ಥಿಗಳೂ ಹೊರಗಿನ ಆಕರ್ಷಣೆಗಳಿಗೆ ಬಲಿಯಾಗದೆ ಶಿಕ್ಷಣದ ಮಹತ್ವವನ್ನು ಮನಗಂಡು ಅದರ ಸದ್ಬಳಕೆ ಮಾಡಿಕೊಳ್ಳಬೇಕಾಗಿದೆ. 'ಶೀಲಾರ್ಜನೆ ಮತ್ತು ಜ್ಞಾನಾರ್ಜನೆ' ಇವೆರಡೂ ಒಟ್ಟೊಟ್ಟಿಗೇ ಕೈಜೋಡಿಸಿ ಸಾಗುವ ಶಿಕ್ಷಣದ ಅಗತ್ಯವಿದೆ. ಶೀಲವಿಲ್ಲದ ಜ್ಞಾನ ಎಷ್ಟು ಅಪಾಯಕಾರಿ ಎಂಬುದನ್ನು ವಿವರಿಸಿ ಹೇಳಬೇಕಾಗಿಲ್ಲ. ಆ ಎಚ್ಚರ ಮುಖ್ಯವಾಗಿ ಪ್ರತಿಯೊಬ್ಬ ತಂದೆ–ತಾಯಿಗೂ ಇರಬೇಕಾಗುತ್ತದೆ.